<u>ಅಸಲು ದಾವಾ ಸಂಖ್ಯೆ: **181/2014**</u> ಡಿ.ಡಬ್ಲ್ಯೂ:- **1**

ದಿನಾಂಕಃ **09-04-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ವಾದಿ ಪರ ವಕೀಲರಿಂದ:-</u>

ಸಾಕ್ಷಿಗೆ ಸರ್ವೇ ನಂ.67/4 ರ 2019-20 ರ ಸಾಲಿನ ಪಹಣಿಯನ್ನು ತೋರಿಸಿ ಸದರಿ ಪಹಣಿಯು 1 ಎಕರೆ 9 ಗುಂಟೆ ಜಮೀನು ವೀರಪ್ಪ, ರುದ್ರಪ್ಪ, ಜಯ್ಯಮ್ಮ, ಶಶಿಕುಮಾರ್ ಮತ್ತು ಮಂಜುನಾಥರವರ ಹೆಸರಿನಲ್ಲಿ ಜಂಟಿಯಾಗಿರುವ ಬಗ್ಗೆ ಸಾಕ್ಷಿ ನೋಡಿ ನಮೂದಾಗಿದ್ದು ಎಂದು ಹೇಳಿದ್ದು ಸಾಕ್ಷಿಯು ಮುಂದುವರೆದು ಜಯ್ಯಮ್ಮ, ಶಶಿಕುಮಾರ್ ಮತ್ತು ಮಂಜುನಾಥರವರು ವೀರಪ್ಪ ಮತ್ತು ರುದ್ರಪ್ಪರವರಿಗೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಪಹಣಿಯನ್ನು ನಿಪಿ-25 ಎಂದು ಗುರುತಿಸಲಾಯಿತು. 1952-53 ನೇ ಸಾಲಿನಲ್ಲಿ ಶಾಂತಮ್ಮ ಕೋಂ ನೀಲಪ್ಪರವರು 3 ಎಕರೆ 36 ಗುಂಟೆ ಜಮೀನನ್ನು ರುದ್ರಪ್ಪ ಮತ್ತು ವೀರಪ್ಪರವರಿಗೆ ಮಾರಾಟ ಮಾಡಿದ್ದಾರೆ. ರುದ್ರಪ್ಪ ಮತ್ತು ವೀರಪ್ಪರವರು ನಮ್ಮ ತಂದೆಯ ತಂದೆಯ ಅಣ್ಣ ತಮ್ಮಂದಿರ ಮಕ್ಕಳು. ಆದರೆ ನಿರ್ದಿಷ್ಟವಾಗಿ ಅಣ್ಣನ ಮಕ್ಕಳೋ ಅಥವಾ ತಮ್ಮನ ಮಕ್ಕಳೋ ಎಂಬುದು ನನಗೆ ಗೊತ್ತಿಲ್ಲ. ವೀರಪ್ಪ ಮತ್ತು ರುದ್ರಪ್ಪರವರು ನಮ್ಮ ಸಂಬಂಧಿಕರು ಎಂದು ತೋರಿಸಲು ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ. ಶಾಂತಮ್ಮರವರು ಸರ್ವೇ ನಂ.67/4 ರಲ್ಲಿ ಆಸ್ತಿಯನ್ನು ವೀರಪ್ಪ ಮತ್ತು ರುದ್ರಪ್ಪವರಿಗೆ ಮಾರಾಟ ಮಾಡಿದ ನಂತರ ಕ್ರಯ ಪತ್ರದ ಆಧಾರದ ಮೇಲೆ ಖಾತೆಯನ್ನು ತಮ್ಮಗಳ ಹೆಸರಿಗೆ ಬದಲಾವಣೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದರಾ ಎಂಬ ಪ್ರಶ್ನೆಗೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಶಾಂತಮ್ಮನವರು ದಾವಾ ಆಸ್ತಿಯನ್ನು ವೀರಪ್ಪ ಮತ್ತು ರುದ್ರಪ್ಪರವರಿಗೆ ಮಾರಾಟ ಮಾಡಿದ್ದರೆ ಅವರ ಹೆಸರಿಗೆ ಖಾತೆ ಮತ್ತು ಪಹಣಿ ಆಗುತ್ತಿತ್ತು ಆದರೆ ವೀರಪ್ಪ ಮತ್ತು ರುದ್ರಪ್ಪರವರು ದಾವಾ ಆಸ್ತಿಯನ್ನು ಮಾರಾಟ ಮಾಡದಿದ್ದ ಕಾರಣ ಅವರ ಹೆಸರಿಗೆ

ಖಾತೆ ಆಗಿಲ್ಲ ಎಂದರೆ ಸರಿಯಲ್ಲ. ನಿಡಿ-1 ರಿಂದ 5 ಸರ್ವೇ ನಂ.67/3 ಮತ್ತು 67/4 ಗಜ ಲೆಕ್ಕದಲ್ಲಿ ನಮೂದಾಗಿದೇ ವಿನಃ ಗುಂಟೆ ಲೆಕ್ಕದಲ್ಲಿ ನಮೂದಾಗಿಲ್ಲ ಎಂದರೆ ಸರಿ. ನಿಡಿ-1 ರಿಂದ 5 ದಾಖಲೆಗಳು ನನಗಾಗಲೀ ಅಥವಾ ನನ್ನ ತಂದೆಯವರಿಗಾಗಲೀ ಸಂಬಂಧಪಟ್ಟ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನಮಗೂ ಮತ್ತು ವೀರಪ್ಪ ಮತ್ತು ರುದ್ರಪ್ಪರವರಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸಂಬಂಧ ಇದೆ ಎಂದು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಮತ್ತು ಸುಳ್ಳು ನಿಡಿ-1 ರಿಂದ 5 ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೀರಪ್ಪ ಮತ್ತು ರುದ್ರಪ್ಪನ ವಾರಸುದಾರರು ದಾವಾ ಆಸ್ತಿಯ ಖಾತೆಗೆ ಸಂಬಂಧಪಟ್ಟಂತೆ ಬದಲಾವಣೆ ಮಾಡಲು ಅರ್ಜಿಯನ್ನು ಸಲ್ಲಿಸಿದ್ದರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-25 ರ ಆರ್ ಟಿ ಸಿ ಯಲ್ಲಿ ವೀರಪ್ಪ ಮತ್ತು ರುದ್ರಪ್ಪ ಯಾರ ಮಕ್ಕಳು ಎಂದು ನಮೂದಾಗಿಲ್ಲ ಎಂದರೆ ಸರಿ. ವಾದಿಗಳು ದಾವಾ ಆಸ್ತಿಯ ಮಾಲೀಕರಾಗಿ ಸ್ವಾಧೀನಾನುಭವದಲ್ಲಿದ್ದರೂ ಸಹ ದಾವಾ ಆಸ್ತಿಯ ಸ್ವಾಧೀನಾನುಭವಕ್ಕೆ ನಮಗೆ ತೊಂದರೆ ಕೊಡುತ್ತಿದ್ದಾರೆ ಎಂದು ಸುಳ್ಳು ಕೌಂಟರ್ ಕ್ಲೈಮ್ ಸಲ್ಲಿಸಿ ಸುಳ್ಳು ಸಾಕ್ಷಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.